# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ:-123 ವಿಜಯನಗರ ಬೆಂಗಳೂರು.40**

ಸಂ:ಸ.ಅ/ವಾರ್ಡ್ ಸಮಿತಿ/ /ಸಭೆ- /20-21 ದಿ:08.03.2021

## ವಿಜಯನಗರ ವಾರ್ಡ್ ಸಂಖ್ಯೆ:-123 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿಬಿಎಂಪಿ ರವರು ಆದೇಶ ಸಂಖ್ಯೆ:ಬಿ12(5) ಪಿ.ಆರ್/35/2020-21 ದಿ:05.12.2020 ರವರ ಆದೇಶದಂತೆ ದಿ:08.03.2021 ರಂದು ವಾರ್ಡ್ ಸಂಖ್ಯೆ: 123 ರ ವಿಜಯನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಪದನಾಮ |
|---|---|---|
| 1. | ಶ್ರೀ. ಡಿ.ಕೆ ಬಾಬು | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ. |
| 2. | ಶ್ರೀಮತಿ. ಸಂಗೀತ ಆರ್ | ಸದಸ್ಯ ಕಾರ್ಯದರ್ಶಿ ವಾರ್ಡ್ ಸಂಖ್ಯೆ: 123. |
| 3. | ಶ್ರೀ. ದೊಡ್ಡವೀರಪ್ಪ | ಸಹಾಯಕ ಅಭಿಯಂತರರು BWSSB |
| 4. | ಶ್ರೀ. ಆದಿನಾರಾಯಣ | ಹಿರಿಯ ಆರೋಗ್ಯ ಪರಿವೀಕ್ಷಕರು |
| 5. | ಶ್ರೀ ಹೇಮಂತ್ ಕುಮಾರ್ | ಸಹಾಯಕ ಆರೋಗ್ಯ ಪರಿವೀಕ್ಷಕರು. |
| 6. | ಶ್ರೀ. ನವೀನ್ ಕುಮಾರ್ | BESCOM |
| 7. | ಶ್ರೀ. ಪುಟಸ್ವಾಮಿ | BESCOM |
| 8. | ಶ್ರೀ. ಎನ್.ಕೃಷ್ಣ ಮೂರ್ತಿ | ತೋಟಗಾರಿಕೆ ಇಲಾಖೆ |

ದಿನಾಂಕ: 08.03.2021 ರಂದು, ಸಮಯ 11.30 ಗಂಟೆಗೆ, ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ.ಡಿ.ಕೆ ಬಾಬು ನೋಡಲ್ ಅಧಿಕಾರಿ ರವರು ಹಾಗೂ ಸಮಿತಿ ಸದಸ್ಯರು ಹಾಜರಾಗಿರುತ್ತಾರೆ.

ಶ್ರೀ.ಡಿ.ಕೆ.ಬಾಬು ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕಾರ್ಯದರ್ಶಿಗಳಾದ ಶ್ರೀಮತಿ. ಸಂಗೀತ ಆರ್ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನೂ ಸ್ವಾಗತಿಸಿದರು.

1. ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ MOH, SWD, SWM, ARO, AEE (Civil) ರವರು ಹಾಜರಿರುವಂತೆ ನೋಡಲ್ ಅಧಿಕಾರಿ ರವರು ಕಾರ್ಯದರ್ಶಿಗೆ ಸೂಚಿಸಿದರು.
2. Horticulture, SWD, BWSSB, BESCOM, Welfare Department, Traffic Police ಹಾಗೂ ಕಾನೂನು ಪೋಲೀಸ್ ಮುಂದಿನ ಸಭೆಯಲ್ಲಿ ಹಾಜರಿರುವಂತೆ ನೋಡಲ್ ಅಧಿಕಾರಿ ರವರು ಕಾರ್ಯದರ್ಶಿಗೆ ಸೂಚಿಸಿದರು.
3. GT Mall ಕಂದಾಯ ವಸೂಲಾತಿ ಬಗ್ಗೆ ಚರ್ಚಿಸಲಾಗಿ ಕಂದಾಯ ಅಧಿಕಾರಿಗಳು ರೂ. ಒಂದು ಕೋಟಿ ಕಂದಾಯ ಬಾಕಿ ಇರುವುದಾಗಿ ತಿಳಿಸಿದರು.
4. Pot hole ಕಾಮಗಾರಿಯನ್ನು ಪೈಪ್ ಲೈನ್ 1ನೇ ಕ್ರಾಸ್ ನಲ್ಲಿ ನಿರ್ವಹಿಸಿದ್ದು ಉಳಿದ ಕಾಮಗಾರಿಯನ್ನು ನಿರ್ವಹಿಸುವುದಾಗಿ ಕಾರ್ಯದರ್ಶಿರವರು ನೋಡಲ್ ಅಧಿಕಾರಿ ರವರು ತಿಳಿಸಿದರು.
5. ನೋಡಲ್ ಅಧಿಕಾರಿ ರವರು ಹಾಜರಿದ್ದ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ, 8ನೇ ಮುಖ್ಯರಸ್ತೆಯಲ್ಲಿ ದಾಖಲಗೊಂಡಿರುವ ದೂರನ್ನು ಬಗೆಹರಿಸಲು ಸೂಚಿಸಿದರು ಹಾಗೂ ರಸ್ತೆಯ ಬದಿಗಳಲ್ಲಿ ಕತ್ತರಿಸಿರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಸೂಚಿಸಿದರು.
6. ನೋಡಲ್ ಅಧಿಕಾರಿ ರವರು ಹಾಜರಿದ್ದ ವಿದ್ಯುತ್ ಇಲಾಖೆ ರವರಿಗೆ, ಚೋಳೂರ ಪಾಳ್ಯ ರಸ್ತೆ, SLN Bar ಬಳಿ ವಿದ್ಯುತ್ ದೀಪಗಳನ್ನು Repairs ಮಾಡಿಸಲು ಹಾಗೂ ಕ್ರಮಕೈಗೊಂಡಿರುವ ಬಗ್ಗೆ ಮುಂದಿನ ಸಭೆಯಲ್ಲಿ ಮಾಹಿತಿ ನೀಡಲು ನೋಡಲ್ ಅಧಿಕಾರಿ ರವರು ಸೂಚಿಸಿದರು.

7. Mask ಕಡ್ಡಾಯವಾಗಿ ಧರಿಸಬೇಕೆಂದು ಹಾಗೂ ಹಬ್ಬದ ದಿನಗಳಲ್ಲಿ, Shopping Mall, Party Hall ಮತ್ತು ಸಾರ್ವಜನಿಕರು ಹೆಚ್ಚು ಸೇರುವಂತಹ ಜಾಗದಲ್ಲಿ ತಿಳುವಳಿಕೆ ಕೊಡಬೇಕೆಂದು ಹಾಗೂ ಕೇಂದ್ರ ಕಛೇರಿಯ ಆದೇಶವನ್ನು ಪಾಲಿಸುವಂತೆ ನೋಡಲ್ ಅಧಿಕಾರಿ ರವರು Marshal ಗೆ ಸೂಚಿಸಿದರು.

8. ಗೊಬ್ಬರ್ ತಯಾರಿಕೆಗಾಗಿ Compost Pit ನಿರ್ಮಾಣ ಮಾಡಿದ್ದು ಇದೇ ರೀತಿಯಲ್ಲಿ ಉಳಿದ ಪಾರ್ಕ್‌ಗಳಲ್ಲಿ Compost Pit ನಿರ್ಮಾಣ ಮಾಡಲು ಹಾಗೂ ತೋಟಗಾರಿಕೆ ಇಲಾಖೆ ಮತ್ತು ಆರೋಗ್ಯ ಇಲಾಖೆ ರವರೊಂದಿಗೆ ಜಂಟಿಯಾಗಿ ನಿರ್ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿದರು.

9. Auto Tipper ಗಳ ಚಾಲಕರು ಈಗ ಚಾಲ್ತಿಯಲ್ಲಿ ಇರುವುದಾಗಿ ಹಾಗೂ ಕಸ ವಿಲೇವಾರಿ ಮಾಡುತ್ತಿರವುದಾಗಿ ಹಾಜರಿದ್ದ ಆರೋಗ್ಯ ಅಧಿಕಾರಿಗಳು ನೋಡಲ್ ಅಧಿಕಾರಿ ರವರಿಗೆ ವಿವರಿಸಿದರು.

10. ಸ್ವಚ್ಛತೆ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ Surveillance rally ನಡೆಸುವುದಾಗಿ ಹಾಜರಿದ್ದ ಆರೋಗ್ಯ ಅಧಿಕಾರಿಗಳು ನೋಡಲ್ ಅಧಿಕಾರಿ ರವರಿಗೆ ವಿವರಿಸಿದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು. ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

RSangeeta

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 123 ವಿಜಯನಗರ.

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು.